**<u>1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ</u>**

**<u>ವಿಶೇಷ ಮೊಕದ್ದಮೆ ಸಂಖ್ಯೆಃ- 215/2024</u>**

**ಪ್ರಾಸಾಃ- 9 ಚಾಸಾಃ- 4**

| | | |
|---|---|---|
| ಸಾಕ್ಷಿಯ ಹೆಸರು | : | ಎನ್.ವರಪ್ರಸಾದ್ |
| ತಂದೆಯ ಹೆಸರು | : | ಎನ್.ಮುತ್ತಯ್ಯ |
| ವಯಸ್ಸು | : | 54 ವರ್ಷ |
| ವೃತ್ತಿ | : | ಉಪ ತಹಸೀಲ್ದಾರ್ |
| ವಾಸಸ್ಥಳ | : | ಸಿಂಧನೂರು |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 21.1.2026**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನಾನು ಜನವರಿ 2019 ರಿಂದ ಮಾರ್ಚ್ 2020 ರವರೆಗೆ ತಹಸೀಲ್ದಾರ್ ಗ್ರೇಡ್ 2 ಎಂದು ಬಳ್ಳಾರಿ ತಾಲ್ಲೂಕು ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ಈ ಪ್ರಕರಣದ ತನಿಖಾಧಿಕಾರಿಗಳ ಕೋರಿಕೆಯ ಮೇರೆಗೆ ನಾನು ಈ ಪ್ರಕರಣದ 1 ನೇ ಆರೋಪಿ ಗೀತಾ ರವರು ದಿಃ 21-6-2011 ರಂದು ಪಡೆದ ಪರಿಶಿಷ್ಟ ಪಂಗಡ ಜಾತಿ ಪ್ರಮಾಣಪತ್ರವನ್ನು ರದ್ದುಗೊಳಿಸಿದ ಬಗ್ಗೆ ದಾಖಲೆಯನ್ನು ಹಾಗೂ ಅದನ್ನು ರದ್ದುಪಡಿಸಿದ ಅಧಿಕಾರಿಯ ಬಗ್ಗೆ ಮಾಹಿತಿಯನ್ನು ಕೇಳಿದ್ದರು. ಸಾಕ್ಷಿಯು ಗುರುತಿಸಿದ ದಿಃ 4-3-2020, 4-8-2020, 28-8-2020 ಮತ್ತು 28-9-2020 ರಂದು ಸಾಕ್ಷಿಯು ತನಿಖಾಧಿಕಾರಿಗಳಿಗೆ ನೀಡಿದ ಪತ್ರಗಳನ್ನು ಕ್ರಮವಾಗಿ ನಿಪಿ-26 ರಿಂದ ನಿಪಿ-29 ಎಂದು ಹಾಗೂ ಅವುಗಳಲ್ಲಿ ಸಾಕ್ಷಿಯ ಸಹಿಗಳನ್ನು ನಿಪಿ-26(ಎ) ರಿಂದ ನಿಪಿ-29(ಎ) ಎಂದು ಗುರುತಿಸಲಾಯಿತು. ಸದರಿ ಪತ್ರದೊಂದಿಗೆ ನೀಡಿದ 4 ದಾಖಲೆಗಳನ್ನು ಸಾಕ್ಷಿಯು ಗುರುತಿಸಿದ್ದು ಅವುಗಳನ್ನು ನಿಪಿ-30 ರಿಂದ 33 ಎಂದು ಹಾಗೂ ಸಾಕ್ಷಿಯ ಸಹಿಗಳನ್ನು ನಿಪಿ-30(ಎ) ರಿಂದ ನಿಪಿ-33(ಎ) ಎಂದು ಗುರುತಿಸಲಾಯಿತು. ನಿಪಿ-33 ದಾಖಲೆಯನ್ನು ನಮ್ಮ ಕಚೇರಿಯಿಂದ ಯಾರು ನೀಡಿದ್ದರು ಎಂದು ಸದರಿ ದಾಖಲೆ ನೋಡಿ ಹೇಳಲು ಆಗುವುದಿಲ್ಲ. ನನಗೆ ತಿಳಿದು ಬಂದ ಮಾಹಿತಿ ಪ್ರಕಾರ 1 ನೇ

ಆರೋಪಿಯು ಬಲಿಜ ಜಾತಿಗೆ ಸೇರಿದ್ದಾಳೆ. ಈ ಬಗ್ಗೆ ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆ ಕೊಟ್ಟಿದ್ದೇನೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ  ಹೆಚ್. ವಿ ವಕೀಲರಿಂದಃ</u>**

ನನಗೆ ಈ ಪ್ರಕರಣದಲ್ಲಿ 1 ನೇ ಆರೋಪಿಯ ಜಾತಿ ಪ್ರಮಾಣ ಪತ್ರವನ್ನು ರದ್ದುಪಡಿಸಿರುವುದನ್ನು ಹೊರತುಪಡಿಸಿ ಬೇರೆ ಯಾವುದೇ ಮಾಹಿತಿ ಇಲ್ಲ. ನಿಪಿ-26 ರಿಂದ 33 ದಾಖಲೆಗಳನ್ನು ನಾನು ಪೋಲೀಸರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸೃಷ್ಟಿ ಮಾಡಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ವ್ಯಕ್ತಿ ಜಾತಿ ಪ್ರಮಾಣ ಪತ್ರ ಕೇಳಿದ್ದಲ್ಲಿ ಅವರು ಸಲ್ಲಿಸಿದ್ದ ದಾಖಲೆಗಳನ್ನು ಪರಿಶೀಲಿಸಿ ವಿಚಾರಣೆ ಮಾಡಿ ಕೊಡುತ್ತೇವೆ. ಗ್ರಾಮ ಲೆಕ್ಕಾಧಿಕಾರಿ, ಕಂದಾಯ ನಿರೀಕ್ಷಕರು ಮತ್ತು ಕೇಸ್ ವರ್ಕರ್ ಗಳು ದಾಖಲೆಗಳನ್ನು ಪರಿಶೀಲಿಸುತ್ತಾರೆ. ನಂತರ ತಹಸೀಲ್ದಾರ್ ರವರು ದಾಖಲಾತಿಗಳನ್ನು ಪರಿಶೀಲಿಸುತ್ತೇನೆ ಎಂದರೆ ಸರಿ. ವಿಚಾರಣೆ ಸಮಯದಲ್ಲಿ ಯಾವುದಾದರೂ ಲೋಪ ದೋಷಗಳು ಕಂಡು ಬಂದಲ್ಲಿ ಅಂತಹ ಅರ್ಜಿಗಳನ್ನು ಅಲ್ಲಿಯೇ ತಿರಸ್ಕರಿಸುತ್ತೇವೆ ಎಂದರೆ ಸರಿ. ನಾವು ಪೋಲೀಸರ ಮಾತನ್ನು ಕೇಳಿಕೊಂಡು ಚಾಸಾ 1 ರವರಿಗೆ ಸಹಾಯ ಮಾಡಲು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೆ. ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆಃ- 215/2024**

**ಪ್ರಾಸಾಃ- 10 ಚಾಸಾಃ- 12**

| | | |
|---|---|---|
| ಸಾಕ್ಷಿಯ ಹೆಸರು | : | ಎನ್.ಆರ್.ಮಂಜುನಾಥ ಸ್ವಾಮಿ |
| ತಂದೆಯ ಹೆಸರು | : | ಎನ್.ರಾಜೇಂದ್ರಪ್ಪ |
| ವಯಸ್ಸು | : | 61 ವರ್ಷ |
| ವೃತ್ತಿ | : | ನಿವೃತ್ತ ತಹಸೀಲ್ದಾರ್ |
| ವಾಸಸ್ಥಳ | : | ಜಗಳೂರು ತಾ. ಮುಷ್ಟೂರು ಗ್ರಾಮ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 27.1.2026**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನಾನು 7-7-2021 ರಿಂದ 31-7-2023 ರವರೆಗೆ ಸಿರುಗುಪ್ಪದಲ್ಲಿ ತಹಸೀಲ್ದಾರ್ ಎಂದು ಕರ್ತವ್ಯ ನಿರ್ವಹಿಸಿದ್ದೇನೆ.

ಆರೋಪಿ 1 ರವರ ಜಾತಿಯ ಬಗ್ಗೆ ನೈಜ ವರದಿಯನ್ನು ನೀಡುವಂತೆ ತನಿಖಾಧಿಕಾರಿಗಳು ನನ್ನನ್ನು ಕೇಳಿಕೊಂಡಿದ್ದರು. ಸಾಕ್ಷಿ ಗುರುತಿಸಿದ ಸದರಿ ಕೋರಿಕೆಯ ಪತ್ರವನ್ನು ನಿಪಿ-34 ಎಂದು ಗುರುತಿಸಲಾಯಿತು. ನಾನು ನಂತರ ಸ್ಥಳೀಯ ಕಂದಾಯ ನಿರೀಕ್ಷಕರಿಂದ ವರದಿಯನ್ನು ಪಡೆದುಕೊಂಡಿದ್ದೆ. ಅದೇ ರೀತಿ ಸ್ಥಳ ಪಂಚನಾಮೆಯನ್ನು ಸಹ ಮಾಡಿಸಿದ್ದೆ. ಸಾಕ್ಷಿ ಗುರುತಿಸಿದ ಎರಡು ಮಹಜರುಗಳನ್ನು ನಿಪಿ-35 ಮತ್ತು 36 ಎಂದು ಗುರುತಿಸಲಾಯಿತು. ನಂತರ ನಾನು ತನಿಖಾಧಿಕಾರಿಗಳಿಗೆ ದಿಃ 28-11-2022 ರಂದು ವರದಿ ಕೊಟ್ಟಿದ್ದೆ. ಸಾಕ್ಷಿ ಗುರುತಿಸಿದ ವರದಿಯನ್ನು ನಿಪಿ-37 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-37(ಎ) ಎಂದು ಗುರುತಿಸಲಾಯಿತು. ನನ್ನ ವಿಚಾರಣೆ ಸಮಯದಲ್ಲಿ 1 ನೇ ಆರೋಪಿಯು ಹಿಂದೂ ರೆಡ್ಡಿ ಜನಾಂಗಕ್ಕೆ ಸೇರಿದ್ದಾಳೆ ಎಂದು ಗೊತ್ತಾಗಿತ್ತು. ಈ ಎಲ್ಲಾ ಸಂಗತಿಗಳ ಬಗ್ಗೆ ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆ ಕೊಟ್ಟಿದ್ದೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಹೆಚ್. ವಿ ವಕೀಲರಿಂದಃ**

ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಿಪಿ-35 ಮತ್ತು 36 ದಾಖಲೆಗಳಲ್ಲಿ ವಂಶಾವಳಿಯಲ್ಲಿ ಹನುಮಂತರೆಡ್ಡಿ ಮತ್ತು ವೆಂಕಮ್ಮರವರಿಗೆ ಸಂತಾನ ಇರುವುದಿಲ್ಲ ಎಂದು ನಮೂದಿಸಲಾಗಿದೆ ಎಂದರೆ ಸರಿ.

ಹನುಮಂತ ರೆಡ್ಡಿ ಮತ್ತು 1 ನೇ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-35 ರಿಂದ 37 ದಾಖಲೆಗಳಲ್ಲಿ ನಮೂದು ಮಾಡಿರುವ ಗೀತಾ ಹಾಗೂ 1 ನೇ ಆರೋಪಿ ಬೇರೆ ಬೇರೆ ಎಂದರೆ ಸರಿಯಲ್ಲ. ಆದ್ದರಿಂದ ಸದರಿ ದಾಖಲೆಗಳಲ್ಲಿ ಹನುಮಂತ ರೆಡ್ಡಿಗೆ ಯಾವುದೇ ಸಂತಾನ ಇರುವುದಿಲ್ಲ ಎಂದು ನಮೂದಿಸಲಾಗಿದೆ ಎಂದರೆ ಸರಿಯಲ್ಲ. ನಾನು ಪೋಲೀಸರ ಮಾತನ್ನು ಕೇಳಿಕೊಂಡು ದಾಖಲೆಗಳನ್ನು ನಮ್ಮ ಕಚೇರಿಯಲ್ಲಿ ಸುಳ್ಳು ಸೃಷ್ಟಿ ಮಾಡಿ ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳ ಪ್ರಕಾರ 1 ನೇ ಆರೋಪಿಗೂ ಮತ್ತು ಹನುಮಂತರೆಡ್ಡಿಗೂ ಯಾವುದೇ ಸಂಬಂಧ ಇಲ್ಲ. ರೆವೆನ್ಯೂ ಇನ್ಸ್ ಪೆಕ್ಟರ್ ಮತ್ತು ಗ್ರಾಮ ಲೆಕ್ಕಾಧಿಕಾರಿಗಳು ಸೃಷ್ಟಿ ಮಾಡಿದ ದಾಖಲೆಗೆ ಪೂರಕವಾಗಿ ನಾನು ಸುಳ್ಳು ವರದಿ ನೀಡಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗುವಂತೆ ನಾನು ಸುಳ್ಳು ವರದಿ ನೀಡಿದ್ದೇನೆ ಎಂದರೆ ಸರಿಯಲ್ಲ. ಮಹಜರಿನಲ್ಲಿ ಸಹಿ ಮಾಡಿದ ಸಾಕ್ಷಿದಾರರುಗಳ ವಿಳಾಸವನ್ನು ನಮೂದು ಮಾಡಿಲ್ಲ ಎಂದರೆ ಸರಿ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಪೋಲೀಸರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ. ಹೇ. ಕೆ. ಸರಿ ಇದೆ.

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**

## 1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ

## ವಿಶೇಷ ಮೊಕದ್ದಮೆ ಸಂಖ್ಯೆ:- 215/2024

**ಪ್ರಾಸಾಃ- 11 ಚಾಸಾಃ- 13**

| | | |
|---|---|---|
| ಸಾಕ್ಷಿಯ ಹೆಸರು | : | ಡಿ.ಗೋಪಾಲ ಕೃಷ್ಣ |
| ತಂದೆಯ ಹೆಸರು | : | ಡಿ.ವೆಂಕಟೇಶುಲು |
| ವಯಸ್ಸು | : | 64 ವರ್ಷ |
| ವೃತ್ತಿ | : | ನಿವೃತ್ತ ಎ ಎಸ್ ಐ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 27.1.2026**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನಾನು 31-7-2022 ರಲ್ಲಿ ಬಳ್ಳಾರಿ ಸಂಚಾರಿ ಪೋಲೀಸ್ ಠಾಣೆಯಲ್ಲಿ ಎ ಎಸ್ ಐ ಆಗಿ ನಿವೃತ್ತನಾಗಿರುತ್ತೇನೆ. ನಾನು ವಾಲ್ಮೀಕಿ ಜನಾಂಗಕ್ಕೆ ಸೇರಿದ್ದೇನೆ. ನನಗೆ 1 ನೇ ಆರೋಪಿಯ ಪರಿಚಯ ಇದೆ. 1 ನೇ ಆರೋಪಿಯು ಶೆಟ್ಟಿ ಬಲಿಜ ಜನಾಂಕ್ಕೆ ಸೇರಿದ್ದಾಳೆ.

ದಿಃ 26-11-2013 ರಲ್ಲಿ 1 ನೇ ಆರೋಪಿಯು ನನ್ನ ಮೇಲೆ, ಜಯಲಕ್ಷ್ಮಿ ಹಾಗೂ ರಾಧಾರವರ ಮೇಲೆ ಕೇಸನ್ನು ಹಾಕಿದ್ದಳು. ಸದರಿ ಕೇಸಿನ ಕ್ರೈಂ ನಂಃ 359-2016 ದ ಗಾಂಧಿನಗರ ಪೋಲೀಸ್ ಠಾಣೆ ಆಗಿದೆ. ಸದರಿ ಪ್ರಕರಣದಲ್ಲಿ ನನಗೆ ಬಿಡುಗಡೆಯಾಗಿತ್ತು. ಸದರಿ ಕೇಸಿನಲ್ಲಿ ನಾವು 1 ನೇ ಆರೋಪಿಗೆ ಹೊಡೆ ಬಡೆ ಮಾಡಿ ಮಾನ ಹಾನಿ ಮಾಡಿದ ಬಗ್ಗೆ 1 ನೇ ಆರೋಪಿಯು ದೂರನ್ನು ಕೊಟ್ಟಿದ್ದಳು. ತಾನು ವಾಲ್ಮೀಕಿ ಜನಾಂಗಕ್ಕೆ ಸೇರಿದ್ದೇನೆ ಎಂದು 1 ನೇ ಆರೋಪಿ ಸದರಿ ಕೇಸಿನಲ್ಲಿ ಹೇಳಿದ್ದಳು. 2011 ರಲ್ಲಿ 1 ನೇ ಆರೋಪಿಗೆ ಪರಿಶಿಷ್ಟ ಪಂಗಡದವಳು ಎಂದು ಹೇಳಿ ಪ್ರಮಾಣ ಪತ್ರ ಕೊಟ್ಟ ಸಂಗತಿ ನನಗೆ ಗೊತ್ತಾಗಿತ್ತು. ಸರಕಾರದಿಂದ 1 ನೆ ಆರೋಪಿಯು ರೂ. 60 ಸಾವಿರ ಹಣವನ್ನು ಪಡೆದ ಬಗ್ಗೆ ಗೊತ್ತಾಗಿತ್ತು. ಈ ಬಗ್ಗೆ ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆ ಕೊಟ್ಟಿದ್ದೇನೆ. 1 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

1 ನೇ ಆರೋಪಿಯು ಗೈರು ಹಾಜರು ಇದ್ದು ಇಪಿ ಸಲ್ಲಿಸಿಲಾಗಿದೆ. ಆಕೆಯ ಗುರುತಿನ ಬಗ್ಗೆ ತಕರಾರು ಇಲ್ಲ ಎಂದು ಅವಳ ಪರ ವಕೀಲರು ತಿಳಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಹೆಚ್. ವಿ ವಕೀಲರಿಂದಃ</u>**

ನನ್ನ ಮೇಲೆ ಎಫ್ ಐ ಆರ್ ದಾಖಲಿಸುವ ಸಮಯದಲ್ಲಿ ಎಸ್ ಸಿ /ಎಸ್ ಟಿ ಕಾಯಿದೆ ಅಳವಡಿಸಿರಲಿಲ್ಲ ಎಂದರೆ ಸರಿ. ನಾನು ನ್ನ ವಿರುದ್ದ ಸಲ್ಲಿಸಿದ್ದ ದೋಷಾರೋಪಣೆ ಪಟ್ಟಿಯನ್ನು ಪ್ರಶ್ನೆ ಮಾಡಿಲ್ಲ. ದಿಃ 26-12-2014 ರಂದು 1 ನೇ ಆರೋಪಿಯು ರೂ.60 ಸಾವಿರ ಹಣವನ್ನು ಸರಕಾರದಿಂದ ಪಡೆದುಕೊಂಡಿದ್ದಳು. 1 ನೇ ಆರೋಪಿಯು ಕೊಟ್ಟಂತಹ ದಾಖಲೆಗಳನ್ನು ನನ್ನ ಮೇಲಾಧಿಕಾರಿಗಳು ದುರುಪಯೋಗಪಡಿಸಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳು ನನ್ನ ಮೇಲಿನ ದ್ವೇಷದಿಂದ 1 ನೇ ಆರೋಪಿಯು ಸಲ್ಲಿಸಿದ ದಾಖಲೆಗಳನ್ನು ದುರುಪಯೋಗಪಡಿಸಿಕೊಂಡು ನಮ್ಮ ವಿರುದ್ದ ಎಸ್ ಸಿ ಎಸ್ ಟಿ ಕಾಯಿದೆ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದರು ಎಂದರೆ ಸರಿಯಲ್ಲ. 1 ನೇ ಆರೋಪಿಯು ನನ್ನ ವಿರುದ್ದ ಯಾವುದೇ ಅಟ್ರಾಸಿಟಿ ಪ್ರಕರಣವನ್ನು ದಾಖಲು ಮಾಡಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳೇ ಸದರಿ ಕಾಯಿದೆ ಅಡಿಯಲ್ಲಿ ನನ್ನ ವಿರುದ್ದ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. 1 ನೇ ಆರೋಪಿ ರೂ.60 ಸಾವಿರ ಹಣವನ್ನು ಸರಕಾರಿದಿಂದ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಈಗ ಹೇಳಿದಂತಹ ಹೇಳಿಕೆಯನ್ನು ಇದಕ್ಕೂ ಮೊದಲು ಗಾಂಧಿನಗರ ಪೋಲೀಸರ ಮುಂದೆ ಕೊಟ್ಟಿದ್ದೇನೆ. ದಾವಣಗೆರೆಯ ಯಾವ ಅಧಿಕಾರಿಯ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದು ಹೆಸರು ನೆನಪಿಲ್ಲ. ನಹಾಜಾನಿ, ದಾವಣಗೆರೆ ರವರ ಹೆಸರನ್ನು ನಾನು ಕೇಳಿಲ್ಲ. ನಾನು ಈ ಪ್ರಕರಣದಲ್ಲಿ ಯಾವುದೇ ಅಧಿಕಾರಿಗಳ ಮುಂದೆ ಹೇಳಿಕೆ ಕೊಟ್ಟಿಲ್ಲದೇ ಇರುವ ಕಾರಣ ನನಗೆ ಅಧಿಕಾರಿಗಳ ಹೆಸರು ಗೊತ್ತಿಲ್ಲ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ. ಹೇ. ಕೆ. ಸರಿ ಇದೆ.

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**

<u>1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ</u>

**<u>ವಿಶೇಷ ಮೊಕದ್ದಮೆ ಸಂಖ್ಯೆಃ- 215/2024</u>**

**ಪ್ರಾಸಾಃ- 12 ಚಾಸಾಃ- 15**

| | | |
|---|---|---|
| ಸಾಕ್ಷಿಯ ಹೆಸರು | : | ಹೆಚ್.ವಿಶ್ವನಾಥ |
| ತಂದೆಯ ಹೆಸರು | : | ಹೆಚ್.ಶ್ರೀಶೈಲಪ್ಪ |
| ವಯಸ್ಸು | : | 46 ವರ್ಷ |
| ವೃತ್ತಿ | : | ತಹಸೀಲ್ದಾರ್, ಚಿತ್ರದುರ್ಗ |
| ವಾಸಸ್ಥಳ | : | ಚಿತ್ರದುರ್ಗ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 27.1.2026**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನಾನು 7-2-2022 ರಿಂದ 7-2-2023 ರವರೆಗೆ ಬಳ್ಳಾರಿ ತಾಲ್ಲೂಕು ಕಚೇರಿಯಲ್ಲಿ ತಹಸೀಲ್ದಾರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣದಲ್ಲಿ ತನಿಖಾಧಿಕಾರಿಗಳು ನಮ ಕಚೇರಿಯಿಂದ 3 ನೇ ಆರೋಪಿಯ ಸೇವಾ ಪುಸ್ತಕದ ದೃಢೀಕೃತ ನಕಲನ್ನು ಹಾಗೂ ಜಾತಿ ಪ್ರಮಾಣ ಪತ್ರವನ್ನು ನೀಡುವಂತೆ ಕೋರಿಕೊಂಡಿದ್ದರು. ನಾನು 3 ನೇ ಆರೋಪಿಯ ಸೇವಾ ಪುಸ್ತಕದ ದೃಢೀಕರಣ ಪತ್ರವನ್ನು ಮತ್ತು 3 ನೇ ಆರೋಪಿಯ ಜಾತಿ ಪ್ರಮಾಣ ಪತ್ರವನ್ನು ನನ್ನ ಪತ್ರದೊಂದಿಗೆ ತನಿಖಾಧಿಕಾರಿಗಳಿಗೆ ನೀಡಿದ್ದೆ. ಸಾಕ್ಷಿ ಗುರುತಿಸಿದ ಪತ್ರವನ್ನು ನಿಪಿ-38 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-38(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಗುರುತಿಸಿದ ಸೇವಾ ಪುಸ್ತಕದ ದೃಢೀಕೃತ ನಕಲನ್ನು ನಿಪಿ-39 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-39(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಗುರುತಿಸಿದ 3 ನೇ ಆರೋಪಿಯ ಜಾತಿ ಪ್ರಮಾಣ ಪತ್ರವನ್ನು ನಿಪಿ-40 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-40(ಎ) ಎಂದು ಗುರುತಿಸಲಾಯಿತು.

ದಿಃ 22-12-2022 ರಂದು ನಾನು ತನಿಖಾಧಿಕಾರಿಗಳಿಗೆ 1 ನೇ ಆರೋಪಿಗೆ ಜಾತಿ ಪರಮಾಣ ಪತ್ರವನ್ನು ನೀಡಿದ ಅಧಿಕಾರಿಯ ವಿವರದ ದಾಖಲೆಗಳು ಇಲ್ಲ ಎಂದು ವರದಿ ಕೊಟ್ಟಿದ್ದೆ. ಸದರಿ ವರದಿಯನ್ನು ನಿಪಿ-41 ಎಂದು ಹಾಗೂ

ಸಾಕ್ಷಿಯ ಸಹಿಯನ್ನು ನಿಪಿ-41(ಎ) ಎಂದು ಗುರುತಿಸಲಾಯಿತು. 2011 ರಲ್ಲಿ ಆರೋಪಿ 3 ಗ್ರಾಮ ಲೆಕ್ಕಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದ ಬಗ್ಗೆ ಮಾಹಿತಿ ನೀಡಿದ್ದೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಮತ್ತು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರು ಕೋರಿದ್ದು, ಕೋರಿಕೆ ಸಕಾರಣಗಳಿಂದ ಕೂಡಿದ್ದರಿಂದ ಅದನ್ನು ಪುರಸ್ಕರಿಸಲಾಗಿದೆ ಮತ್ತು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಮತ್ತು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರಿಗೆ ಅನುಮತಿ ನೀಡಲಾಯಿತು).**

**ಪಾಟೀ ಸವಾಲುಃ ಅಭಿಯೋಜಕರವರಿಂದಃ**

ನಿಪಿ-41 ರಲ್ಲಿ ನಾನು ಮಲ್ಲಿಕಾರ್ಜುನ ಮತ್ತು 3 ನೇ ಆರೋಪಿರವರು ಗಾರಮ ಲೆಕ್ಕಾಧಿಕಾರಿಯಾಗಿ ಕೆಲಸ ಮಾಡಿದ್ದರು ಎಂದು ಹೇಳಿದ್ದೇನೆ ಎಂದರೆ ಸರಿ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ ಎಂ ಹೆಚ್ ವಕೀಲರಿಂದಃ**

ಮಲ್ಲಿಕಾರ್ಜುನ ಮತ್ತು ನದೀಶ್ ರವರು ದಿಃ 25-6-2011 ರ ಜಾತಿ ಪ್ರಮಾಣ ಪತ್ರಕ್ಕೆ ಶಿಫಾರಸ್ಸು ಮಾಡಿದ ಬಗ್ಗೆ ನಾನು ಅವರುಗಳನ್ನು ವಿಚಾರಣೆ ಮಾಡಿದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸಾಕ್ಷಿಗೆ ಮಲ್ಲಿಕಾರ್ಜುನ ಮತ್ತು ನಂದೀಶ್ ರವರು ಗ್ರಾಮ ಲೆಕ್ಕಾಧಿಕಾರಿಗಳಾಗಿ ಕೆಲಸ ಮಾಡುತ್ತಿದ್ದ ಬಗ್ಗೆ ಅವರ ಸೇವಾ ದಾಖಲೆಯನ್ನು ಪಡೆದುಕೊಂಡಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಂದೀಶ್ ರವರ ಬಗ್ಗೆ ಮಾತ್ರ ವರದಿ ಕೇಳಿದ್ದರಿಂದ ನಾನು ನಂದೀಶ್ ನ ಬಗ್ಗೆ ದಾಖಲೆಯನ್ನು ತನಿಖಾಧಿಕಾರಿಗಳಿಗೆ ಕೊಟ್ಟಿದ್ದೆ ಎಂದು ಹೇಳಿರುತ್ತಾರೆ. ಸದರಿ ಇಬ್ಬರು ಗ್ರಾಮ ಲೆಕ್ಕಾಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದದರು ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಅಭಿಯೋಜನೆಗೆ ಅನುಕೂಲವಾಗುವಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ರಿಂದ 3 ನೇ ಆರೋಪಿತರ ವಿರುದ್ದ ಸುಳ್ಳು ಆರೋಪವನ್ನು ಮಾಡಲಾಗಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೆ. ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**